1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 01

CW- 01

ಪ್ರ. ಬೋ. ದಿನಾಂಕಃ 04-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ನಾಗರಾಜ್ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪೇಂಟ್ ಕೆಲಸ |
| ವಾಸ | : | ಶಿವಪುರ . |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-2 ರಿಂದ 15 ನನಗೆ ಗೊತ್ತು. ಚಾಸಾ-15 ನನ್ನ ಅತ್ತಿಗೆ, ಚಾಸಾ-14 ನನ್ನ ಚಿಕ್ಕಮ್ಮ. ನನ್ನ ತಂದೆ ತಾಯಿಗೆ ನಾವು ಮೂರು ಜನ ಮಕ್ಕಳು. ಮೃತ ಯುವರಾಜ ನನ್ನ ತಮ್ಮ . ನನ್ನ ತಮ್ಮ ಪೇಂಟ್ ಕೆಲಸ ಮಾಡುತ್ತಿದ್ದ. ನಾನು ಮತ್ತು ನನ್ನ ತಮ್ಮ ಹೊಳಲ್ಲೇರೆಯಲ್ಲಿ ಕೆಲಸ ಮಾಡುತ್ತಿದ್ದೇವು. ಚಾಸಾ-15 ಉಷಾ ಶಿವಪುರದಲ್ಲಿ ವಾಸ ಮಾಡುತ್ತಿದ್ದರು. ಆರೋಪಿ ನನಗೆ ಗೊತ್ತು.

2022 ನೇ ಇಸ್ವಿಯಲ್ಲಿನನ್ನ ಚಿಕ್ಕಮ್ಮ ಚಾಸಾ-14 ರವರು ನನಗೆ ಫೋನ್ ಕರೆ ಮಾಡಿ , ನಿನ್ನ ತಮ್ಮ ಮೃತಪಟ್ಟಿದ್ದಾನೆ ಎಂದು ತಿಳಿಸಿದರು. ನಾನು ವಿಚಾರ ತಿಳಿದು ಕೂಡಲೇ ಶಿವಪುರದ ನಮ್ಮ ಮನೆಗೆ ಬಂದೆ. ಸದರಿ ಮನೆಯಲ್ಲಿ ನನ್ನ ತಮ್ಮನ ಶವ ಇತ್ತು. ಆತನ ಸಾವಿಗೆ ಆರೋಪಿ ಕಾರಣ ಎಂದು ಗೊತ್ತಾಯಿತು. ನಂತರ ನನ್ನ ತಮ್ಮನ ಶವವನ್ನು ಚಿಗಟೇರಿ ಆಸ್ಪತ್ರೆಗೆ ಸಾಗಿಸಿರುತ್ತೇವೆ. ನನ್ನ ತಮ್ಮನ ಮೋಬೈಲ್ ಪರಿಶೀಲನೆ ಮಾಡಿದಾಗ ನನ್ನ ತಮ್ಮ ಆಡಿಯೋ , ವಿಡಿಯೋ ಮಾಡಿಕೊಂಡಿದ್ದಿದ್ದು ಕಂಡು ಬಂತು. ಆದ್ದರಿಂದ ಆತನ ಸಾವಿಗೆ ಆರೋಪಿಯೇ ಕಾರಣನಾಗಿರುತ್ತಾನೆ ಎಂದು ಗೊತ್ತಾಯಿತು. ನನ್ನ ಅತ್ತಿಗೆ ಚಾಸಾ-15 ಉಷಾರವರ ಮನೆಗೆ ನನ್ನ ಮೃತ ತಮ್ಮ ಹೋಗುತ್ತಿದ್ದದ್ದರಿಂದ ನನ್ನ ತಮ್ಮ ಆರೋಪಿ ಮಧ್ಯ ಜಗಳ ಆಗಿತ್ತು ಎಂದು ಗೊತ್ತಾಯಿತು. ಆ ಕಾರಣಕ್ಕೆ ಆತ ಮೃಪಟ್ಟಿರುತ್ತಾನೆ.

ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ಚಾಸಾ-10 ಅರುಣ್‌ಕುಮರ್ ರವರಿಂದ ಬರೆಯಿಸಿ ನೀಡಿರುತ್ತೇನೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದೂರಿನ ಜೊತೆ ನನ್ನ ತಮ್ಮನ ಮೋಬೈಲ್ ಕೊಟ್ಟಿದ್ದೇನೆ. ಪೊಲೀಸರು ಮಹಜರ್ ಮಾಡಿಕೊಂಡು , ಫೋಟೋ ತೆಗೆಸಿ , ಮೋಬೈಲ್ ನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮೋಬೈಲ್ ಫೋನ್ ನಲ್ಲಿ ಮಾತನಾಡಿದ ವ್ಯಕ್ತಿ ನನ್ನ ತಮ್ಮ ಆಗಿದ್ದು ಮಹಜರ್ ಸಮಯದಲ್ಲಿ ಸದರಿ ದೃಷ್ಯವನ್ನು ನಾವು ನೋಡಿದ್ದೇವೆ ಮತ್ತು ಸಂಭಾಷಣೆ ಕೆಳಿಸಿಕೊಂಡಿದ್ದೇವೆ. ಸದರಿ ಧ್ವನಿ ನನ್ನ ತಮ್ಮನದು ಎಂದು ಗೊತ್ತಾಯಿತು.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಫೊಟೋದಲ್ಲಿರುವ ವ್ಯಕ್ತಿಗಳು ವೆಂಕಟೇಶಪ್ಪ ಮತ್ತು ಕೃಷ್ಣಮೂರ್ತಿ ಆಗಿರುತ್ತಾರೆ. ಶೀಲ್ ಕವರ್ ನಿಂದ ಮೋಬೈಲ್ ತೆರೆದು ತೋರಿಸಲಾಯಿತು. ಸದರಿ ಮೋಬೈಲನ್ನು ಸಾಕ್ಷಿ ನೋಡಿ ಗುರುತಿಸಿದು , ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಮೋಬೈಲ್ ಕವರ್ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಿಂದ ತಂದಿದ್ದ ಲ್ಯಾಪಟಾಪ್ ನಲ್ಲಿ ಸಂಭಾಷಣೆ ಮತ್ತು ದೃಷ್ಯಾವಳಿಗಳನ್ನು ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು ಮತ್ತು ಕೇಳಿಸಲಾಯಿತು. ಸದರಿ ದೃಷ್ಯಾವಳಿಯಲ್ಲಿರುವುದು ನನ್ನ ತಮ್ಮ ಹಾಗೂ ಅದರಲ್ಲಿರುವ ಸಂಭಾಷಣೆ ನನ್ನ ತಮ್ಮನದಾಗಿರುತ್ತದೆ. ಸದರಿ ದೃಷ್ಯಾವಳಿ ಮತ್ತು ಸಂಘಾಷಣೆ ನಿಪಿ.4 ರ ಮೋಬೆಎಲ್ ನಲ್ಲಿ ದಾಖಲಾಗಿರುತ್ತವೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನಾನು ಮತ್ತು ನನ್ನ ಹೊಳಲ್ಕೆರೆಯಲ್ಲಿ ಮತ್ತು ಶಿವಪುರದಲ್ಲಿ ನಮ್ಮ ಮನೆಯಲ್ಲಿ ತಮ್ಮ

ಒಟ್ಟಿಗೆವಾಸವಾಗಿರುತ್ತೇವೆ. ಕೆಲಸಕ್ಕೆ ಹೋದರೆ ಹೊಳಲ್ಕೆರೆಯಲ್ಲಿರುತ್ತೇವೆ. ಹೊಳಲ್ಕೆರೆಯ ಯಾವ ಸ್ಥಳದಲ್ಲಿ ವಾಸ ಮಾಡುತ್ತೇವೆ ಎಂದು ಹೆಸರು ಹೇಳಲು ಆಗುವುದಿಲ್ಲ. ಶಿವಪುರದ ಮನೆಯಲ್ಲಿ ನಾನು ಮತ್ತು ನನ್ನ ತಮ್ಮ ಜೊತೆಯಲ್ಲಿ ಇರುತ್ತೇವೆ. ಚಾಸಾ-15 ರವರ ಮನೆ ನಮ್ಮ ಮನೆಯಿಂದ 50 ರಿಂದ 60 ಮೀಟರ್ ದೂರದಲ್ಲಿರುತ್ತದೆ. ನಮ್ಮ ಮನೆ ಮತ್ತು ಅವರ ಮನೆ ಸ್ಕೂಲ್ ನ ಹಿಭಾಗದಲ್ಲಿದ್ದು , ನಮ್ಮ ಮನೆ ಸ್ಕೂಲಿನ ಮುಂಭಾಗದಲ್ಲಿದ್ದು ಮನೆಗಳ ಮಧ್ಯ ಮೂರು ಮನೆಗಳ ಅಂತರವಿದೆ. ನಾನು ಮತ್ತು ನನ್ನ ತಮ್ಮ ಆ ದಿನ ಜೊತೆಯಲ್ಲಿಯೇ ಕೆಲಸ ಮಾಡುತ್ತಿದ್ದೇವು , ಆತ ಆ ದಿನ ಮಧ್ಯಹ್ನ ಕೆಲಸದ ಸ್ಥಳದಿಂದ ಮನೆಯ ಕಡೆ ಬಂದ. ಆತ ಯಾವ ದಿನಾಂಕ , ಎಷ್ಟು ಗಂಟೆ ಸಮಯದಲ್ಲಿ ಕೆಲಸದ ಸ್ಥಳದಿಂದ ಬಂದ ಎಂದು ಹೇಳಲು ನೆನಪಿಲ್ಲ. ಹೊಳಲ್ಕೇರೆಯಿಂದ ಶಿವಪುರ ಬೈಕಿನಲ್ಲಿ ಬಂದರೆ ಒಂದು ಗಂಟೆ ಬೇಕಾಗುತ್ತದೆ, ಬಸ್ಸಿನಲ್ಲಿ ಬಂದರೆ ಒಂದುವರೆ ಗಂಟೆ ಬೇಕಾಗುತ್ತದೆ. ಆತನ ಸಾವಿನ ಎಷ್ಟು ದಿನದ ಮೊದಲು ಗಲಾಟೆಯಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಮ್ಮ ಸದರಿ ಗಲಾಟೆ ವಿಚಾರವನ್ನು ನನ್ನ ಬಳಿ ಹೇಳಿರಲಿಲ್ಲ. ಹಾಗೂ ಆತ ತನ್ನ ವೈಯಕ್ತಿಕ ವಿಚಾರವನ್ನು ನನ್ನ ಬಳಿ ಹೇಳುತ್ತಿರಲಿಲ್ಲ.

ನನಗೆ ಆ ದಿನ ಫೋನ್ ಕರೆ ಬಂದ ನಂಬರ್ ನೆನಪಿರುವುದಿಲ್ಲ. ಕಾರಣ ನನ್ನ ಮೋಬೈಲ್ ಕಳೆದು ಹೋಗಿರುತ್ತದೆ. ಮೋಬೈಲ್ ನಂಬರ್ ನ್ನು ಮತ್ತು ಮೋಬೈಲ್ ಕಳೆದ ವಿಚಾರವನ್ನು ದೂರಿನಲ್ಲಿ ಬರೆಸಿಲ್ಲ. ದೂರನ್ನು ನಾನು ಹೇಳಿದಂತೆ ಬರೆದಿದ್ದಾರೆ, ಆ ನಂತರ ಸಹಿ ಮಾಡಿದ್ದೇನೆ. ದೂರಿನಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ದೂರನ್ನು ನಾನೇ ಹೇಳಿ ಬರೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮನ ಮೋಬೈಲ್ ಡಿಸ್‌ಪ್ಲೇ ಇರಲಿಲ್ಲ ಎನ್ನುವುದು ಸರಿಯಲ್ಲ. ಸದರಿ ಮೋಬೈಲ್ ನಲ್ಲಿ ಕೇವಲ ಆಡಿಯೋ ಮಾತ್ರ ಇರುತ್ತದೆ , ವಿಡಿಯೋ ಇಲ್ಲ ಎನ್ನುವುದು ಸರಿಯಲ್ಲ. ಪೊಲೀಸರಿಗೆ ನಿಮ್ಮ ತಮ್ಮನದೇ ಆಡಿಯೋ ಆಗಿರುತ್ತದೆ ಎನ್ನುವ ಬಗ್ಗೆ ಬೇರೆ ಯಾವುದಾದರೂ ಆತ ಮಾತನಾಡಿದ ಧ್ವನಿ ಮುದ್ರಣ ನೀಡಿದ್ದೀರಾ ಎಂದರೆ ಸಾಕ್ಷಿ - ಆತ ನನ್ನ ತಮ್ಮನಾಗಿರುವುದರಿಂದ ಆತನ ಧ್ವನಿಯ ಬಗ್ಗೆ ನನಗೆ ಖುದ್ದು ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಆ ರೀತಿಯ ಆಡಿಯೋ ನನ್ನ ತಮ್ಮನದಲ್ಲ ಎನ್ನುವುದು ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ

ಮುಂದುವರೆದು ಸುಳ್ಳು ಹೇಳುವ ಅವಶ್ಯಕತೆ ಇಲ್ಲ ಎಂದು ನುಡಿದಿದ್ದಾರೆ.  ಗಲಾಟೆ ವಿಚಾರ ಮೋಬೈಲ್ ನಲ್ಲಿ ಇರುವ ವಿಡಿಯೋ ಮೂಲಕ ನನಗೆ ಗೊತ್ತಾಗಿರುತ್ತದೆ.

ಉಷಾ ರವರ ಗಂಡ ಆರೋಪಿಯ ಬಳಿ ಹಣ ಕೊಡುವುದು ತೆಗೆದುಕೊಳ್ಳುವುದು ಮಾಡುತ್ತಿದ್ದ ಎಂದರೆ ಸಾಕ್ಷಿ - ಅದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಈ ವಿಚಾರ ನಿಮಗೆ ಸರಿ ಹೋಗುತ್ತಿರಲಿಲ್ಲ , ಆದ್ದರಿಂದ ನೀವು ಆರೋಪಿಯ ಮೇಲೆ ಸುಳ್ಳು ಕೇಸು ಹಾಕಿದ್ದೀರಾ ಎಂದರೆ ಸಾಕ್ಷಿ - ಆರೋಪಿಯ ಮೇಲೆ ನಮಗೆ ಯಾವುದೇ ದ್ವೇಷ ಇಲ್ಲ ಎಂದು ನುಡಿದಿದ್ದಾರೆ.  ಆರೋಪಿ ಮತ್ತು ನನ್ನ ತಮ್ಮನ ಮಧ್ಯ ಯಾವುದೇ ಗಲಾಟೆ ಆಗಿಲ್ಲ ಎನ್ನುವುದು ಸರಿಯಲ್ಲ. ಈ ಕೇಸಿಗಾಗಿ ಗಲಾಟೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮೃತ ತಮ್ಮ ಉಷಾರವರೊಂದಿಗೆ ಅಕ್ರಮ ಸಂಬಂಧಹೊಂದಿದ್ದ ಎನ್ನುವುದು ಸರಿಯಲ್ಲ. ಅದನ್ನು ಮುಚ್ಚಿಹಾಕಲು ಈ ಸುಳ್ಳು ಪ್ರಕರಣ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಈ ಕೇಸಿಗೆ ತೊಂದರೆಯಾಗುತ್ತದೆ ಎಂದು ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮನ ಸಾವಿಗೂ , ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ನನ್ನ ತಮ್ಮನೇ ತನ್ನ ವೈಯಕ್ತಿಕ ಕಾರಣದಿಂದ ನೇಣುಹಾಕಿಕೊಂಡು ಮೃತಪಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ಗಲಾಟೆಯಾಗಿರಲಿಲ್ಲ ಎನ್ನುವುದು ಸರಿಯಲ್ಲ.

ನಿಪಿ.4 ರ ಮೊಬೈಲ್ ನ ದೃಷ್ಯಾವಳಿಯಲ್ಲಿರುವುದು ನನ್ನ ತಮ್ಮನದು ಹಾಗೂ ಅದರಲ್ಲಿರುವ ಸಂಭಾಷಣೆ  ನನ್ನ ತಮ್ಮನದಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.  ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ:-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.